

ಚಿತ್ರ: ಶಶಿಧರ ಹಳೇಮನಿ

# ನಿಷ್ಪಕ್ಷಪಾತ

'ಮಗನೇ! ನಿನ್ನ ಧೋತರಕ್ಕೆಲ್ಲಾ ರಕ್ತದ ಕಲೆ ಹೇಗೆ ಅಂಟಿಕೊಂಡಿತು? ನನಗೆ ತುಂಬಾ ಗಾಬರಿಯಾಗುತ್ತಿದೆ, ಏನಾಯಿತು ಹೇಳಪ್ಪಾ'?

'ಓ ಅಮ್ಮ, ನನ್ನ ಕಾಲನ್ನು ಕೊಡಲಿಯಿಂದ ಕೊಯ್ದುಕೊಳ್ಳಲು ಪ್ರಯತ್ನಿಸಿದೆ. ಅದಕ್ಕೆ ಹೀಗಾಗಿದೆ ತಾಯಿ'

ಇದನ್ನು ಕೇಳುತ್ತಲೇ, ಆತನ ತಾಯಿಯು ಮಗನ ಧೋತರವನ್ನೆತ್ತಿ ನೋಡಿದಾಗ ಕಾಲಿನ ಚರ್ಮ ಸೀಳಿ ಮಾಂಸ ಹೊರಗೆ ನೇತಾಡುತ್ತಿತ್ತು. ಆದರೂ, ಮಗನಾದ ನಾಮದೇವನು ತನಗೆ ಏನೂ ಆಗಿಯೇ ಇಲ್ಲವೆನ್ನುವಂತೆ ನಡೆದುಕೊಳ್ಳುತ್ತಿದ್ದನು.

'ನೀನೊಬ್ಬ ಶತಮೂರ್ಖ!' ತಾಯಿಯು ನಾಮದೇವನಿಗೆ ಬೈಯ್ದಳು. ಸಿಡುಕಿನ ಸ್ವರದಿಂದಲೇ, 'ಯಾರಾದರೂ ತಮ್ಮ ಕಾಲನ್ನೇ ಕೊಡಲಿಯಿಂದ ಕತ್ತರಿಸಿಕೊಳ್ಳಲು ಪ್ರಯತ್ನಿಸುತ್ತಾರಾ? ನೀನೊಬ್ಬ ಹುಚ್ಚ ಇದ್ದಹಾಗೆ ಇದ್ದೀಯಾ! ಒಂದು ವೇಳೆ ಕಾಲು ಏನಾದರೂ ತುಂಡಾಗಿದ್ದರೆ ಜೀವನ ಪರ್ಯಂತ ಹೆಳವನಾಗಿ ಕಾಲ ಕಳೆಯಬೇಕಾಗುತ್ತದೆ. ಯಾವ ಸಾಧನೆಯನ್ನೂ ಮಾಡಲಾಗದೇ ಸಾವು ಬರುವವರೆಗೂ ಜೀವಿಸಬೇಕಾಗುತ್ತದೆ, ಅಂತಹ ಬಾಳಿನಲ್ಲಿ ಯಾವ ಸ್ವಾದವೂ ಇಲ್ಲ. ಒಂದು ವೇಳೆ ಗಾಯದಿಂದಾಗಿ ನಿನ್ನ ಕಾಲು ಕೊಳೆತರೋ ಇಲ್ಲವೇ ಮಾಂಸವೆಲ್ಲಾ ಇಲ್ಲವಾಗಿ ಜೀವಜಂತುಗಳಿಗೆ ಆಶ್ರಯ ನೀಡುವಂತಹ ಭೀಕರ ಕಾಯಿಲೆ ಬಂದರೆ ಏನು ಗತಿ?'

ಇನ್ನೂ ಅದನ್ನು ಹಾಗೆಯೇ ಬಿಟ್ಟರೆ ಪೂರ್ಣ ಕೊಯ್ದು ಹಾಕುವಂತಹ ಪರಿಸ್ಥಿತಿ ಬಂದೊದಗಬಹುದು. ನನಗೆ ನಿನ್ನ ಸ್ಥಿತಿ ಕಂಡು ಸಂಕಟವಾಗುತ್ತಿದೆ. 'ನೀನು ನೋಡಿದರೆ, ನಿನಗೇನೂ ಅಗದವನಂತೆ ಇದ್ದೀಯಾ?' ಎನ್ನುತ್ತಾ ಸತ್ಯಕ್ಕೆ ಹತ್ತಿರವಿರುವ ಮುಂದೆ ಎದುರಾಗುವ ಸ್ಥಿತಿಯನ್ನು ಜ್ಞಾಪಿಸಿಕೊಂಡು, ತಾನು ಅರಿತಿದ್ದನ್ನು ಸೇರಿಸಿ ತಿಳಿವಳಿಕೆಯ ಮಾತನ್ನು ಹೇಳಿದಳು.

ಅಮ್ಮ, ನನ್ನ ಬಗ್ಗೆ ನಿನಗೆಷ್ಟು ಪ್ರೀತಿ ಇದೆ. ನನ್ನ ಜೀವನದ ಬಗ್ಗೆ ನಿನಗೆ ಕಾಳಜಿ ಇದೆ. ನನ್ನೊಂದಿಗೆ ಬಾಳುವ ಮಹತ್ವಾಕಾಂಕ್ಷೆ ನಿನಗೆ ಹೇಗೆ ಇದೆಯೋ ಹಾಗೆಯೇ, ಗಿಡಮರಗಳಿಗೂ ಕೂಡಾ ಜೀವವಿದೆ. ಅವುಗಳಿಗೂ ಬಾಳಬೇಕೆಂಬ ಆಕಾಂಕ್ಷೆಯೂ ಇದ್ದೇ ಇರುತ್ತದೆ. ನಮ್ಮ ಸ್ವಾರ್ಥಕ್ಕಾಗಿ ಅವುಗಳನ್ನು ನಾವು ಬಳಸುತ್ತೇವೆ.

ಕೊಡಲಿಯಿಂದ ಗಿಡಮರಗಳಿಗೆ ಏಟು ಕೊಟ್ಟರೆ ಅವುಗಳಿಗೆ ನೋವಾಗದೇ? ಹೇಳಮ್ಮ ನನ್ನ ಈ ಪ್ರಶ್ನೆ ಸರಿಯಾಗಿದೆ ತಾನೇ? ಅಮ್ಮ ಆ ದಿನ ನಿನಗೆ ನೆನಪಿದೆಯಲ್ಲವೇ, ಅಂದು ನೀನು ಹೇಳಿದೆ ಎಂದು ನಾನು ಅಡವಿಗೆ ಹೋಗಿ, ಪಾವಕ ಮರದ ತೊಗಟೆ ಕಿತ್ತು ಹಾಕಿ ಮನೆಗೆ ತೆಗೆದುಕೊಂಡು ಬಂದೆ.

ಆ ದೃಶ್ಯವು ನನ್ನಲ್ಲಿ ಕಣ್ಣೀರು ತರುವಂತೆ ಮಾಡಿತ್ತು. ಅದಕ್ಕೆ ನಾನು ನನ್ನ ಕಾಲಿನ ಚರ್ಮವನ್ನು ಸಹ ಕಿತ್ತಿಕೊಳ್ಳಬೇಕೆನಿಸಿತು. ಅದಕ್ಕೆ ಹಾಗೆಯೇ ಮಾಡಿದೆ. ನಾನು ಹೀಗೆ ಮಾಡಲು ಕಾರಣವೇನೆಂದರೆ ಆ ಮರಕ್ಕೂ ನನ್ನಂತೆಯೇ ಏನಾದರೂ ಗಾಯವಾಗಿರುತ್ತದೆಯೇ? ಎಂದು ಪರೀಕ್ಷಿಸಲು ಹೀಗೆ ಮಾಡಿದೆ.

ನಾಮದೇವನ ತಾಯಿಯು ತನ್ನ ಮಗನಾದ ನಾಮದೇವನನ್ನು ಪಾವಕ ಗಿಡದ ತೊಗಟೆಯನ್ನು ಕಷಾಯ ಮಾಡಲು ತರಿಸಿದ್ದನ್ನು ಸ್ಮರಿಸಿದಳು. ನಂತರ ದುಃಖದಲ್ಲಿ ಅಳಲು ಪ್ರಾರಂಭಿಸಿದಳು.

ಓ ಪ್ರೀತಿಯ ನನ್ನ ನಾಮು! ನಿನ್ನ ಮಾತುಗಳನ್ನಾಲಿಸಿದ ಮೇಲೆ ನನಗರಿವಾಯಿತು ಹಾಗೂ ನೀನೊಬ್ಬ ಪ್ರಸಿದ್ಧ ಸಾಧುವಾಗುತ್ತೀಯ ಅಂತ ಅನಿಸುತ್ತಿದೆ. ಗಿಡಮರಗಳಿಗೆ ಹಾಗೂ ಇನ್ನಿತರ ಜೀವಜಂತುಗಳಿಗೂ ಸಹ ಮಾನವರಂತೆ ಜೀವಿಸುವ ಹಕ್ಕಿದೆ. ಅವು ಸಹ ನಮ್ಮಂತೆಯೇ ನೋವು– ನಲಿವು, ವಿಷಾದ ವ್ಯಕ್ತಪಡಿಸಬಲ್ಲವು. ಇದು ಇಂದು ನನ್ನಲ್ಲಿ ಅರಿವನ್ನುಂಟು ಮಾಡಿದೆ.

ದಿನಗಳುರುಳುತಲಿ ಆತನೇ ಪ್ರಖ್ಯಾತ ಉಪಾಸಕ, ಧರ್ಮಿಷ್ಟ, ಪೂಜಕ ನಾಮದೇವನಾದನು.

■ ಸಂಗ್ರಹ: **ಹನುಮಂತ ಭಟ್ ಬಿ.**